ISSN : 3048-7137

# ಆರಯ್

## ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೨

ಏಪ್ರಿಲ್-ಜೂನ್ ೨೦೨೫

Kannada Online Double Blind Peer-Review Quarterly Research Journal

Volume-2, Number-2 April-June 2025

ಕಟ್ಟುಗ

**ಬಸವರಾಜ ಕೋಡಗುಂಟಿ**

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**

ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨, ಸಂಚಿಕೆ–೨, ಏಪ್ರಿಲ್–ಜೂನ್ ೨೦೨೫

ISSN : 3048-7137

**ARAY**

Kannada Online Double Blind Peer-Review Quarterly Research Journal

Volume-2, Number-2, April-June 2025

https://aray.in/

ಪುಟ/Pages : 134

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ

**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ

**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ

**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**

**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ

**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**

**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ

**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**

**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು

**ಪರಶುರಾಮ ಕೋಡಗುಂಟಿ**

ಪ್ರಕಾಶಕ, ಬಂಡಾರ ಪ್ರಕಾಶನ

ಮಸ್ಕಿ–೫೮೪ ೧೨೪, ಜಿ. ರಾಯಚೂರು

ಕರೆ–೯೧ ೯೪೮೬೪ ೦೭೭೧೧

bandaraprakashana@gmail.com

https://bandaraprakashana.com

# ಪ ರಿ ವಿ ಡಿ


| | |
|---|---|
| ಕಾಲದಲ್ಲಿ ಕಲೆಯ ಬಯಲಿನ ತೆಲುಗು ಬಯಲಾಟ<br>**ಸ.ರಘುನಾಥ** | **4-13** |
| ಜನಪದ ರಂಗಭೂಮಿಯಲ್ಲಿ ಪುರಾಣ ಕಥಾನಕಗಳು: ಮರುಚಿಂತನೆ<br>**ಡಿ.ಎಸ್.ಚೌಗಲೆ** | **14-22** |
| ಬಯಲಾಟಗಳಲ್ಲಿ ಮಹಿಳೆಯರು<br>**ಅನಸೂಯ ಕಾಂಬಳೆ** | **23-37** |
| ಗಡಿನಾಡ ಬಯಲಾಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ<br>**ಅರುಣ್ ಕುಮಾರ್ ಎಂ ಬಿ** | **38-48** |
| ಮಧ್ಯ ಕರ್ನಾಟಕ ಭಾಗದ ಬಯಲಾಟದ ಸ್ವರೂಪ ಮತ್ತು ಬಯಲಾಟದ ನೆಲೆಗಳು<br>**ಚಿಕ್ಕಣ್ಣ ಯಣ್ಣೆಕಟ್ಟೆ** | **49-87** |
| ಚಕ್ರಬಿಂಬ ಕೋಟೆ: ಒಂದು ಪಾಠ್ಯಿಕ ವಿಶ್ಲೇಷಣೆ<br>**ಡಾ. ಮುನಿರಾಜ ಎ.** | **88-98** |
| ನನ್ನೂರಿನ ನಾಟಕರಂಗ<br>**ಹುಚ್ಚೇಗೌಡ ಎಚ್.** | **99-113** |
| ಆನೇಕಲ್ ತಾಲ್ಲೂಕಿನ ಕೇಳಿಕೆಗಳು<br>**ಕೆ. ಮುನಿಯಪ್ಪ** | **114-121** |
| ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ<br>**ಶ್ವೇತ ಜೆ.** | **122-130** |

ISSN : 3048-7137

# ಗಡಿನಾಡ ಬಯಲಾಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ

ಅರುಣ್ ಕುಮಾರ್ ಎಂ ಬಿ

**ಸೂಚಕ ಪದಗಳು**

ಗಡಿನಾಡು, ಬಯಲಾಟ, ಜಾನಪದ ರಂಗಭೂಮಿ, ಸಂಸ್ಕೃತಿ

ಸಾರಲೇಖ:

ಗಡಿನಾಡದ ಮಧುಗಿರಿ, ಮಡಕಶಿರಾ, ಪಾವಗಡ ಮತ್ತು ಶಿರಾ ಭಾಗಗಳಲ್ಲಿ ಬೆಳೆದಿರುವ ಬಯಲಾಟಗಳು ಈ ಭಾಗದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಸ್ಪಷ್ಟಪಡಿಸುತ್ತವೆ. ಇದು ಗ್ರಾಮೀಣ ಜನರ ಜೀವನಶೈಲಿ, ಜಾತಿ–ಕುಲ ಭೇದವಿಲ್ಲದ ಸಹಭಾಗಿತ್ವ, ಧಾರ್ಮಿಕ ಆಚರಣೆ, ಕೃಷಿ ಚಟುವಟಿಕೆಗಳು ಮತ್ತು ಸ್ಥಳೀಯ ಜಾನಪದ ಸಂಪ್ರದಾಯಗಳ ಮೇಲೆ ಆಧಾರಿತವಾಗಿದೆ. ಭಾಗವತ, ಮದ್ದಲೆ, ಭಜಂತ್ರಿ, ತಮಟೆ, ಮುಖವೀಣೆ ಕಲಾವಿದರು ಮತ್ತು ಗ್ರಾಮೀಣ ನಾಯಕರು ಈ ಕಲೆಯ ನಿರ್ವಹಣೆ, ಅಭ್ಯಾಸ ಮತ್ತು ಪ್ರದರ್ಶನದಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಬಯಲಾಟವು ಆರ್ಯ–ದ್ರಾವಿಡ ಸಂಸ್ಕೃತಿ, ವೈದಿಕ ಪೂಜಾ ಕ್ರಮಗಳು ಮತ್ತು ಜೈನ ಕಥಾಪ್ರಸಂಗಗಳನ್ನು ಸಂಯೋಜಿಸಿರುವುದು ಕಂಡುಬರುತ್ತದೆ. ಹೀಗೆ ಬಯಲಾಟಗಳು ಕೇವಲ ಮನರಂಜನೆ ಅಲ್ಲದೆ, ಸಮುದಾಯ ಸಂಬಂಧ ಬೆಳೆಸುವ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪೋಷಿಸುವ ಮೂಲಕ ಗಡಿನಾಡದ ಜನಜೀವನದ ಆಂತರ್ಯವನ್ನು ಪ್ರತಿಬಿಂಬಿಸುತ್ತವೆ.

ಮಧುಗಿರಿ ತಾಲೂಕು ಸೀಮಾಂಧ್ರದೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ. ಆದುದರಿಂದ ಈ ಪ್ರದೇಶಗಳೆಲ್ಲ ದ್ವಿಭಾಷಾವಲಯಗಳಾಗಿವೆ. ಇಲ್ಲಿನ ಜನರು ಕನ್ನಡ ಮತ್ತು ತೆಲುಗು ಎರಡು ಭಾಷೆಗಳನ್ನು ಸಹ ಮಾತನಾಡಬಲ್ಲವರಾಗಿದ್ದಾರೆ. ತಮ್ಮ ಸಂಸ್ಕೃತಿಯಲ್ಲಿಯೂ ಸಹ ಕೊಳು–ಕೊಡುಗೆಯ ನೀತಿಯನ್ನು ಅನುಸರಿಸುತ್ತ ಸಾಗಿ ಬಂದಿದ್ದಾರೆ. ಈ ಗಡಿನಾಡ ಭಾಗಗಳಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿ ಹಾಗೂ ಪಶುಸಂಗೋಪನೆಯಾಗಿದೆ. ಸಂಕ್ರಾಂತಿ ಹಬ್ಬ ಮುಗಿದ ನಂತರ ಕೃಷಿ ಕೆಲಸದಿಂದ ಇವರಿಗೆ ಬಿಡುವು ದೊರೆಯುತ್ತದೆ. ಆಗ ಇವರು ತಮ್ಮ ಆಸರಿಕೆ ಮತ್ತು ಬೇಸರಿಕೆಯನ್ನು ಕಳೆದುಕೊಳ್ಳಲು ಕೋಲಾಟ, ವೀರಗಾಸೆ, ಬಯಲಾಟ, ನಾಟಕಗಳು, ಜಾನಪದ ಆಚರಣೆಗಳು,ಜಾತ್ರೆ ಮತ್ತು ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಇದರಲ್ಲಿ ಬಯಲಾಟವು ಅಪ್ಪಟ ದೇಸಿ ಜಾನಪದ ರಂಗಕಲೆಯಾಗಿದೆ ಎಂಬುದು ಬಹುತೇಕ ಸಂಶೋಧಕರ ಅಭಿಮತವಾಗಿದೆ. ಈ ಬಯಲಾಟ ಎಂಬ ದೇಶೀಕಲೆಯನ್ನು ತಲೆಮಾರಿನಿಂದ ತಲೆಮಾರಿಗೆ ಜಾನಪದರು ತಮ್ಮ ಅನುಭವದ ನೆಲೆಯಲ್ಲಿ ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಬಯಲಾಟ ಪರಂಪರೆಯು ಈ ಗಡಿ ಪ್ರದೇಶಗಳಲ್ಲಿ ಆರಾಧನಾ ರೂಪದಲ್ಲಿ ಆವಿರ್ಭವಿಸಿದ ಒಂದು ಜಾನಪದ ರಂಗಭೂಮಿಯ ಕೂಸಾಗಿದೆ. ಇದು ಹಳ್ಳಿಯ ಅನಕ್ಷರಸ್ಥ ಜನತೆಯ ಮೌಕಿಕ ಪರಂಪರೆಯಿಂದ ಬೆಳೆದು ಬರುತ್ತಾ ಕ್ರಿಯಾತ್ಮಕ ಚಟುವಟಿಕೆಗಳನ್ನು ಮೈಗೂಡಿಸಿಕೊಳ್ಳುತ್ತಾ, ದೇಶಿಯ ಕುಣಿತಗಳನ್ನು ಅರಗಿಸಿಕೊಳ್ಳುತ್ತ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಬೆಳೆಸಿಕೊಂಡು ಅಭಿವ್ಯಕ್ತಗೊಂಡು ಸಾಗಿ ಬರುತ್ತಿದೆ. 'ಜಾನಪದ ರಂಗಭೂಮಿ ಹಳ್ಳಿಗಳಲ್ಲಿ ಬೆಳೆದಿರುವುದರಿಂದ ಅವರ ಜೀವನವಿಧಾನ, ರೀತಿ–ನೀತಿ, ಚಾತುರ್ಯ ಚಮತ್ಕಾರ, ಆದರ್ಶ, ಮೌಲ್ಯ, ಶ್ರದ್ಧೆ ಇವೆಲ್ಲಾ ಅದರಲ್ಲಿ ಯಥಾವತ್ತಾಗಿ ಚಿತ್ರತವಾಗಿರುತ್ತದೆ. ಈ ದೃಷ್ಟಿಯಿಂದ ಜಾನಪದನಾಟಕ ಹಳ್ಳಿಯ ಬದುಕಿನ ಅಂತಃಸತ್ವಕ್ಕೆ ಹಿಡಿದ ಕನ್ನಡಿ ಎಂದು ಹೇಳಬಹುದು. ನಮ್ಮ ಬಯಲಾಟದ ಜೀವಂತಿಕೆ ಇರುವುದು ಇಲ್ಲಿಯೇ, ಈ ಬಯಲಾಟ ಪರಂಪರೆಯು ಇಲ್ಲಿ ದೈವಿಕ ಆಚರಣೆಯಾಗಿಯೂ ಜಾತನವಾಗಿ ಮುಂದುವರೆಯುತ್ತಿದೆ. ಆದಿಕಾಲದಿಂದ ಜಾತಿ–ಕುಲಗಳ ನಿರ್ಬಂಧವಿಲ್ಲದೆ ಈ ಬಯಲಾಟದಲ್ಲಿ ಎಲ್ಲರೂ ಭಾಗವಹಿಸುತ್ತಾ ಜಾತ್ರೆ ಹಾಗೂ ಇತರೆ ಉತ್ಸವಗಳಂತೆ ಊರೊಟ್ಟಿಗಿನ ಕೆಲಸವಾಗಿಯೂ ಇಲ್ಲಿನ ಜನರು ಭಾವಿಸಿದ್ದಾರೆ. ಪಾತ್ರ ಕಟ್ಟುವಿಕೆ, ರಂಗ ನಿರ್ವಹಣೆ ಹಾಗೂ ರಂಗದ ಮೇಲೆ ನಡೆಯುವ ಚಟುವಟಿಕೆಗಳಲ್ಲಿ ಭಾಗವಹಿಸುವ ಸಮಾಜದ ಎಲ್ಲಾ ಸಮುದಾಯಗಳ ಸಾಮಾಜಿಕ ಅನನ್ಯತೆಯ ಸಂಕೇತವಾಗಿ ಬಯಲಾಟಗಳು ಕೆಲಸ ಮಾಡಿಕೊಂಡು ಬಂದಿರುವುದನ್ನು ಗುರುತಿಸಬಹುದು. ಬಯಲಾಟಗಳು ಜಾನಪದ ಮನಸ್ಸನ್ನು

ISSN : 3048-7137

ರಂಜಿಸುವುದರ ಜೊತೆಗೆ ಗ್ರಾಮೀಣ ಜನರಲ್ಲಿ ಸಂಬಂಧ ಬೆಳೆಸುವಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪ್ರಾಚೀನ ಕಾಲದಿಂದಲೂ ಗ್ರಾಮೀಣ ಜನರು ಒಬ್ಬರಿಗೊಬ್ಬರು ತಮ್ಮ ಕುಲಕಸುಬುಗಳಿಂದ ಬದುಕಲು ಸಹಕರಿಸಿ ಸಹಬಾಳ್ವೆಯನ್ನು ನಡೆಸಿಕೊಂಡು ಬಂದಿದ್ದಾರೆ. ಈ ಬಯಲಾಟ ನಡೆಯುವಾಗ ಹಳ್ಳಿಗಳಲ್ಲಿ ಗೌಡ, ಗೊಂಚಿಕಾರ, ಶಾನುಭೋಗ, ಪಟೇಲ, ರೈತ ಹಾಗೂ ಕೃಷಿ ಕಾರ್ಮಿಕ ವರ್ಗದವರಿಂದಲೇ ಪೋಷಣೆಗೆ ಒಳಗಾಗಿ ಅವರ ಸಹಭಾಗಿತ್ವದಿಂದ ಪ್ರೋತ್ಸಾಹದಿಂದ ಈ ಕಲೆಯು ಬೆಳೆದುಕೊಂಡು ಬಂದಿರುವ ಪೋಷಕ ಕಲೆಯಾಗಿದೆ.

ಬಯಲಾಟವನ್ನು ಹಳ್ಳಿಯ ಜನರಿಗೆ ಕಲಿಸಿಕೊಡುವ ವ್ಯಕ್ತಿಗೆ ಹಾಗೂ ಆ ನಾಟಕದ ನಿರ್ದೇಶನ ಮಾಡುವವನನ್ನು ಭಾಗವತ ಎಂದು ಕರೆಯಲಾಗುತ್ತದೆ. ಹಳ್ಳಿಯಲ್ಲಿ ಈ ಭಾಗವತನಿಗೆ ಗುರು ಸ್ಥಾನವನ್ನು ನೀಡುವ ಪದ್ಧತಿ ಇದೆ. ಈ ಭಾಗವತ ಯಾವುದೇ ಜಾತಿಗೆ ಸೇರಿದವನಾಗಿರಬಹುದು. ಆದರೆ ಇಲ್ಲಿ ಜಾತಿ ಮುಖ್ಯವಲ್ಲ; ಆತನ ವಿದ್ಯೆ ವಿದ್ವತ್ತಿಗೆ ಬೆಲೆ ಕೊಡಲಾಗುತ್ತದೆ. ನಿದರ್ಶನವಾಗಿ ಹನುಮಂತಪುರದ ನರಸೇಗೌಡ ಎಂಬ ಭಾಗವತರನ್ನು ಸಂಪರ್ಕಿಸಿದಾಗ ಅವರು ಮಧುಗಿರಿ, ಮಡಕಶಿರಾ, ಮತ್ತು ಶಿರಾ ಭಾಗದಲ್ಲಿರುವ ಕೆಲವು ಭಾಗವತರು ಮತ್ತು ಅವರ ಜಾತಿಗಳನ್ನು ಹೀಗೆ ಹೇಳಿದ್ದಾರೆ. ಶಂಕ್ರಪ್ಪ(ಮಡಿವಾಳ), ಲಕ್ಷ್ಮಿನರಸಪ್ಪ(ಆದಿಕರ್ನಾಟಕ), ಸಣ್ಣತಿಮ್ಮಯ್ಯ (ಶೆಟ್ಟಿಬಣಜಿಗ), ದಾಸಪ್ಪ(ನಾಯಕ), ಈರಮಾಳಪ್ಪ(ಒಕ್ಕಲಿಗ), ಪುಟ್ಟಣ್ಣ (ಲಿಂಗಾಯಿತ), ನಾಗೇಶಶಾಸ್ತ್ರಿ(ಬ್ರಾಹ್ಮಣ), ಕೃಷ್ಣಮೂರ್ತಿ(ಹಟ್ಟಿಗೊಲ್ಲ), ದೊಡ್ಡೀರಪ್ಪ (ಕುರುಬ) ಹೀಗೆ ನಾನಾ ಜಾತಿಯ ಭಾಗವತರು ಈ ಸಮಾಜದಲ್ಲಿ ಕಾಣಸಿಗುತ್ತಾರೆ.

ಭಾಗವತರೆ ಬಯಲಾಟದ ಮುಖ್ಯ ಸೂತ್ರಧಾರಿ, ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಸಮಾಜಕ್ಕೆ ನೀತಿಬೋಧನೆ ಮಾಡುವಂತಹ ಪ್ರಸಂಗವನ್ನು ಆಯ್ಕೆ ಮಾಡಿಕೊಂಡು ಪಾತ್ರಧಾರಿಗಳ ಕಂಠಕ್ಕೆ, ಅವರ ದೇಹದಾರ್ಢ್ಯಕ್ಕೆ ಅನುಗುಣವಾಗಿ ಪಾತ್ರಗಳನ್ನು ಹಂಚುತ್ತಾರೆ. ಈ ಪಾತ್ರಧಾರಿಗಳಿಗೆ ಭಾಗವತರು ಅಕ್ಷರ ಕಲಿಸುವ ಶಿಕ್ಷಕನಾಗಿಯೂ ಕೆಲವೊಮ್ಮೆ ಜವಾಬ್ದಾರಿ ನಿರ್ವಹಿಸುವ ಹೊಣೆಗಾರಿಕೆ ಭಾಗವತರದ್ದಾಗಿರುತ್ತದೆ. ಪಾತ್ರನಿರ್ವಹಿಸುವ ವ್ಯಕ್ತಿಗಳಿಗೆ ಅವರವರ ಮಾತುಗಳನ್ನು ಬರೆದುಕೊಡುವುದು, ಮಾತುಗಳನ್ನು ಹೇಳಿಕೊಡುವುದು, ಸಂಭಾಷಣೆಗಳನ್ನು ಯಾವ ರೀತಿ ಹೊರಹೊಮ್ಮಿಸಬೇಕೆಂಬುದನ್ನು ಹೇಳಿಕೊಡುತ್ತಾರೆ. ಕುಣಿತಗಳನ್ನು ಕಲಿಸುವುದು, ತಾಳಗಳಿಗೆ ತಕ್ಕಂತೆ ನರ್ತಿಸುತ್ತ ರಂಗದ ಮೇಲೆ ಯಾವ ರೀತಿ ವರ್ತಿಸಬೇಕೆಂಬುದರ ಬಗ್ಗೆ ತಿಳುವಳಿಕೆ ನೀಡುತ್ತಾರೆ. ಸಾಮಾಜಿಕ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಭಾಗವತರು ಯಾವ ಜಾತಿಗೆ ಸೇರಿದವರಾದರು ಸಹ

ಪಾತ್ರಧಾರಿಗಳು ಭಾಗವತರನ್ನು ಭಗವಂತನ ಸಮಾನ, ವಿದ್ಯೆ ಕಲಿಸುವ ಗುರುವಿನಷ್ಟೇ ಶ್ರೇಷ್ಠ ಎಂಬ ನಂಬಿಕೆ ಇಲ್ಲಿನ ಜನರಲ್ಲಿ ಕಂಡುಬರುತ್ತದೆ. "ಭಗವಂತನನ್ನು ಒಂದು ರಾತ್ರಿಯ ಮಟ್ಟಿಗೆ ಆಡಿಸುವಾತನೇ ಭಾಗವತನು, ಬಯಲಾಟ ನಾಟಕ ಕಲ್ಪನೆಯಲ್ಲಿ ದೇವರೇ ಇಳೆಯೆಂಬ ರಂಗಕ್ಕೆ ಬಂದು, ಭಾಗವತನು ಕುಣಿಸಿದಂತೆ ಕುಣಿಯುವ ಒಂದು ವಿಶೇಷ ತೆರನ ಕಲ್ಪನೆಯನ್ನು ತಾಳಿದೆ". ಭಾಗವತರು ಆ ಊರಿನ ದೇವಾಲಯದ ಹಜಾರ, ಬಯಲುರಂಗಮಂದಿರ, ಚಾವಡಿ ಇಂತಹ ಪ್ರದೇಶಗಳನ್ನು ಆಯ್ದುಕೊಂಡು ಪಾತ್ರಧಾರಿಗಳಿಗೆ ತಾಲೀಮು ಮಾಡಿಸುತ್ತಾರೆ. ಅವರಿಗೆ ಕುಣಿತ ಗಳನ್ನು ಕಲಿಸುವುದು, ಪಾತ್ರಧಾರಿಗಳಿಗೆ ಮಾತುಗಾರಿಕೆ, ಅಭಿನಯ ಹೇಳಿಕೊಡುವಲ್ಲಿ ಹಿಮ್ಮೇಳದವರು ಮುಮ್ಮೇಳದವರು ಸಹಾಯಮಾಡುತ್ತಾರೆ. ಆದುದರಿಂದ ಹಿಮ್ಮೇಳ ಮತ್ತು ಮುಮ್ಮೇಳದವರನ್ನು ಸಹಭಾಗವತರೆಂದು ಸಹ ಕರೆಯಬಹುದಾಗಿದೆ. ಬಯಲಾಟದಲ್ಲಿ ಭಾಗವತರ ಕಂಠಕ್ಕೆ ತಕ್ಕಂತೆ ಧ್ವನಿಗೂಡಿಸಲು ಹಿಮ್ಮೇಳದವರು ಇರಲೇಬೇಕು.

ಕೆಲವು ಕಡೆ ಮದ್ದಲೆಯವರು ಅದೇ ಊರಿನವರಾಗಿರುತ್ತಾರೆ. ಗ್ರಾಮದಲ್ಲಿನ ಆಸಕ್ತ ಹಿರಿಯರು ಸ್ವಂತ ಶಕ್ತಿಯಿಂದ ಸತತ ಅಭ್ಯಾಸದಿಂದ ಮದ್ದಲೆ ಬಾರಿಸುವುದನ್ನು ಕರಗತ ಮಾಡಿಕೊಂಡಿರುತ್ತಾರೆ. ಅವರು ಹವ್ಯಾಸಿ ಕಲಾವಿದರಾಗಿರುತ್ತಾರೆ. ಅವರು ಶಾಸ್ತ್ರೋಕ್ತ ಬೋಲುಗಳನ್ನು ಕಲಿತಿರುವುದಿಲ್ಲ. ಆದರೂ ಮದ್ದಲೆ ಬಾರಿಸುವವರನ್ನು ಅನುಕರಿಸಿ ಸ್ವಂತ ಆಸಕ್ತಿ ವಹಿಸಿ ಕಲಿತಿರುತ್ತಾರೆ. ಇವರು ಸಹ ತಮ್ಮ ಸೇವೆಯ ಕುರುಹಾಗಿ ಪ್ರತಿ ರಾತ್ರಿ ಪ್ರಸಂಗ ಮುನ್ನಡೆಸುವ ವೇಳೆಯಲ್ಲಿ ನೆರವಾಗುತ್ತಾರೆ. ಮಧುಗಿರಿಯ ಭಾಗದಲ್ಲಿ ದೊಂಬಿದಾಸರು, ಮರಾಠಿಗರು, ಮಡಿವಾಳರು, ಬ್ರಾಹ್ಮಣರು, ಆದಿ ಕರ್ನಾಟಕ ಜನಾಂಗದ ಮದ್ದಲೆಕಾರರು ಇರುವುದು ಕಂಡುಬರುತ್ತದೆ. ಕೆಲವೊಂದು ಹಳ್ಳಿಗಳಲ್ಲಿ ಒಕ್ಕಲಿಗರು, ಗೊಲ್ಲರು, ಕುರುಬರು, ಶೆಟ್ಟಿ ಬಣಜಿಗರು ಸಮಾಜದ ಇನ್ನಿತರೆ ಜನಾಂಗದವರು ಕೂಡ ಮದ್ದಲೆ ಬಾರಿಸುವ ಹವ್ಯಾಸಿ ಕಲಾವಿದರಾಗಿರುತ್ತಾರೆ. ಬಯಲಾಟದ ಯಶಸ್ವಿ ಪ್ರದರ್ಶನದಲ್ಲಿ ಪ್ರಮುಖವಾದ ವಾದ್ಯವಾಗಿರುವುದು ಮುಖವೀಣೆ ಎನ್ನುವ ಗಾಳಿ ವಾದ್ಯ. ಇದು ಗೇಣುದ್ದವಿರುವ ಪರಿಣಾಮಕಾರಿ ಕೊಳವೆ ವಾದ್ಯ. ಇದನ್ನು ಮಾತ್ರ ಕೆಲವೇ ಕೆಲವು ಸೀಮಿತ ಜನಾಂಗದವರು ನುಡಿಸುವುದನ್ನು ಮನನ ಮಾಡಿಕೊಂಡಿರುವುದು ಕಂಡುಬರುತ್ತದೆ. ವಿಶೇಷವಾಗಿ ಕೊರಚರು, ಛಲವಾದಿಗಳು ಹಾಗೂ ಭಜಂತ್ರಿಯವರು ಈ ಮುಖವೀಣೆ ಕಲೆಯ ರೂವಾರಿ ಗಳಾಗಿರುತ್ತಾರೆ. ಇವರೆಲ್ಲ ತಮ್ಮ ಪೂರ್ವಿಕರಿಂದ ಈ ಕಲೆಯನ್ನು ಕಲಿತಿರುವುದು ಕಂಡುಬರುತ್ತದೆ. ಈ ರಂಗ ಕಲೆಗೆ ಮುಖವೀಣೆ ಕಲಾವಿದರ ಅನಿವಾರ್ಯತೆ ಇದೆ. ಇತ್ತೀಚೆಗೆ ಇವರು ದೊರಕುವುದು ವಿರಳವಾಗುತ್ತಿದೆ.

## ಸಮುದಾಯದ ಕೆಲಸವಾಗಿ ಬಯಲಾಟ

ಬಯಲಾಟದ ಪ್ರಸಂಗ ನಡೆಯುವ ದಿನ ಭಜಂತ್ರಿಯವರು ಇರಲೇಬೇಕು. ಬಯಲಾಟಗಳಲ್ಲಿ ತಮ್ಮ ಸೇವೆಯನ್ನು ಮಾಡುವುದು ತಮ್ಮ ಆಜನ್ಮಸಿದ್ಧ ಹಕ್ಕು ಎಂದು ಭಜಂತ್ರಿಯವರು ಬಹಳ ಭಕ್ತಿ ಭಾವದಿಂದ ಪಾಲ್ಗೊಳ್ಳುತ್ತಾರೆ. ಆಟದ ದಿನ ಪಾತ್ರಧಾರಿಗಳಿಗೆ ಮುಖಕ್ಷೌರ ಮಾಡುವ ನಿಮಿತ್ತ ಇವರು ನೆರವಾಗುತ್ತಾರೆ. ಇವರು ಮಾಡಿದ ಸೇವೆಗೆ ಪಾತ್ರಧಾರಿಗಳು ಹಣದ ರೂಪದಲ್ಲಿ ಇಲ್ಲವೇ ದವಸಧಾನ್ಯದ ರೂಪದಲ್ಲೂ ಅವರಿಗೆ ಕಾಣಿಕೆಯನ್ನು ನೀಡುತ್ತಾರೆ. ಬಯಲಾಟದ ದಿನ ಊರ ಜನರ ಎದುರಿಗೆ ಪ್ರೇಕ್ಷಕರೆದುರಿಗೆ ಅವರನ್ನು ಕರೆದು ಹಾರ ಹಾಕಿ ಸನ್ಮಾನ ಮಾಡುತ್ತಾರೆ. ಬಯಲಾಟದಲ್ಲಿ ಮುಖ್ಯ ಪಾತ್ರವನ್ನು ವಹಿಸುವುದು ರಂಗಸಜ್ಜಿಕೆ. ರಂಗಸಜ್ಜಿಕೆಯನ್ನು ಬಯಲಾಟ ಆಡುವ ಊರಿನವರುಇಲ್ಲವೇ ಆ ಊರಿನ ಪಕ್ಕದವರು ಇದನ್ನ ನಿರ್ವಹಿಸುತ್ತಾರೆ. ಈ ಗಡಿ ಭಾಗದಲ್ಲಿ ಮಡಕಸಿರಾ, ಮಧುಗಿರಿ, ಮಿಡಿಗೇಶಿ ಭಾಗದಲ್ಲಿ ನಡೆಯುವಂತಹ ಬಯಲಾಟಗಳಿಗೆ ಬೇಡತ್ತೂರಿನ ಜಗದೀಶ್ ರವರು ಡ್ರಾಮಾ ಸೀನರಿಯನ್ನು ಪೂರೈಕೆ ಮಾಡುತ್ತಾರೆ ಹಾಗೂ ಬಣ್ಣಗಾರಿಕೆಯನ್ನು ಅವರೇ ಪಾತ್ರಧಾರಿಗಳಿಗೆ ಮಾಡುತ್ತಾರೆ. ಗ್ರಾಮೀಣ ಜನತೆಯ ಧರಿಸುವ ವಸ್ತ್ರಗಳನ್ನು ಶುಚಿಗೊಳಿಸುವ ಕಾರ್ಯವು ಆ ಊರಿನ ಅಥವಾ ಅಕ್ಕಪಕ್ಕದ ಊರುಗಳಲ್ಲಿ ವಾಸಿಸುವ ಮಡಿವಾಳರಿಗೆ ಸೇರಿದ್ದು, ಇವರು ಜಾತ್ರೆ ಉತ್ಸವಗಳಂತೆ ಬಯಲಾಟಕ್ಕೂ ಸಹ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ. ಬಯಲಾಟದ ಪ್ರದರ್ಶನ ಕಾಲದಲ್ಲಿ ಬೆಳಕಿನ ವ್ಯವಸ್ಥೆಗೆ ಸಹಕರಿಸುವವರು ಮಡಿವಾಳರೇ ಆಗಿರುತ್ತಾರೆ. ತಮ್ಮಲ್ಲಿರುವ ಬಟ್ಟೆ ತುಂಡುಗಳನ್ನು ಹೊಸದು ದೊಡ್ಡಬತ್ತಿಗಳನ್ನು ತಯಾರು ಮಾಡಿಕೊಂಡು ಮಣ್ಣಿನ ಮಡಕೆಯಲ್ಲಿ ಹೊಂಗೆ ಎಣ್ಣೆಯನ್ನು ಹಾಕಿ, ಬತ್ತಿಗಳನ್ನು ಎಣ್ಣೆಯಲ್ಲಿ ನೆನೆಸಿ ದೀಪವನ್ನು ಹಚ್ಚುತ್ತಾರೆ. ವಿದ್ಯುತ್ ದೀಪಗಳು ಇಲ್ಲದೆ ಇರುವಂತಹ ಕಾಲದಲ್ಲಿ ಇವರು ಪಂಜುಗಳನ್ನ ಹಚ್ಚಿ ಬಯಲಾಟದ ಕಲೆಗೆ ಪ್ರೋತ್ಸಾಹವನ್ನು ನೀಡುತ್ತಾ ಬಂದಿದ್ದಾರೆ. ಬೆಳಕಿನ ವ್ಯವಸ್ಥೆಗೆ ಬೇಕಿರುವ ಮಣ್ಣಿನಿಂದ ತಯಾರಿಸುವ ದೊಡ್ಡ ದೀಪಗಳನ್ನು ಕುಂಬಾರರು ಒದಗಿಸುತ್ತಾರೆ. ಇಂತಹ ಕೆಲಸಕ್ಕೆ ವಿಶೇಷವಾಗಿ ದೀಪಗಳನ್ನು ತಯಾರಿಸುತ್ತಾರೆ. ದೀಪಕ್ಕೆ ಹಾಕುವ ಬತ್ತಿಗಳನ್ನು 'ಇಲಾಲುಬತ್ತಿ'ಗಳೆಂದು ಕರೆಯುತ್ತಿದ್ದರೆಂದು ಹಿರಿಯ ಕಲಾವಿದರು ಹೇಳುತ್ತಾರೆ. ಬಯಲಾಟ ನಡೆಯಲು ಒಂದು ಶುಭ ಸೂಚಕವಾದ ದಿನಾಂಕವು ಬೇಕಾಗುತ್ತದೆ. ಈ ದಿನವನ್ನು ಸೂಚಿಸಲು ಇವರು ತಮ್ಮ ಹಳ್ಳಿಯ ಜೋಯಿಸರಿಗೆ ತಾಂಬೂಲ ಹಾಗೂ ಕಾಣಿಕೆಯನ್ನು ನೀಡಿ ದಿನವನ್ನು ಗೊತ್ತುಪಡಿಸಿಕೊಳ್ಳುತ್ತಾರೆ. ಆದರೆ ಈ ಭಾಗದಲ್ಲಿ ಶಿವರಾತ್ರಿ ಹಬ್ಬ, ದೀಪಾವಳಿ, ಜಾತ್ರೆ ಮತ್ತು ಉತ್ಸವಗಳಲ್ಲದರೆ ಅದೇ ಶುಭದಿನವೆಂದು ಪರಿಗಣಿಸಿ

ಪ್ರದರ್ಶನವನ್ನು ಏರ್ಪಡಿಸುವುದು ಕೂಡ ಕಂಡುಬರುತ್ತದೆ.

"ಕಾಳಗ ಪ್ರಸಂಗವಿಲ್ಲದ ಬಯಲಾಟವೇ ಇಲ್ಲ" ಎಂಬ ಮಾತಿದೆ. ಅದರಂತೆ ಈ ಭಾಗದಲ್ಲಿ ರಾಮ-ರಾವಣರ ಯುದ್ಧ, ಮೈರಾವಣವಧೆ, ರಕ್ತಬೀಜಾಸುರವಧೆ, ಇಂದ್ರಜಿತು ಕಾಳಗ, ದೇವಿ ವಿಲಾಸ, ಕೀಚಕ ವಧೆ ಮುಂತಾದ ಕಥಾಪ್ರಸಂಗಗಳು ಕರ್ನಾಟಕ ಆಂಧ್ರ ಎರಡು ನೆಲೆಯಲ್ಲಿ ಪ್ರದರ್ಶಿತವಾಗುತ್ತವೆ. ಬಯಲಾಟದಲ್ಲಿ ರಂಗದ ಮಧ್ಯ ಭಾಗದಿಂದ ದೇವತಾ ಪಾತ್ರಗಳು ಪ್ರವೇಶಿಸಿದರೆ, ರಂಗದ ಬಲಭಾಗದ ಹೊರಗಡೆಯಿಂದ ರಾಕ್ಷಸ ಪಾತ್ರಗಳು ಆಗಮಿಸುತ್ತವೆ, ದೈತ್ಯ ಪಾತ್ರಗಳನ್ನು ಕರೆತರಲು ತಮಟೆ ವಾದಕರು ಉಪಸ್ಥಿತರಿರುತ್ತಾರೆ. ಪ್ರದರ್ಶನ ಏರ್ಪಟ್ಟಾಗ ರಾಕ್ಷಸ ಪಾತ್ರಗಳನ್ನು ರಂಗಕ್ಕೆ ಕರೆತರುವಾಗ ತಮ್ಮ ವಾದ್ಯವಾದ ತಮಟೆಯ ನಾದದಿಂದ ಕೊಂಬನ್ನು ಊದುತ್ತ ಹಲವಾರು ವರಸೆಗಳ ಮುಖಾಂತರ ನರ್ತಿಸುತ್ತ ರಂಗಕ್ಕೆ ಕರೆತರುವುದನ್ನು ಗಮನಿಸಬಹುದು. ಬಯಲಾಟದ ರಂಗ ನಿರ್ಮಾಣ ಕಾರ್ಯದಲ್ಲಿ ಆದಿ ಕರ್ನಾಟಕ ಜನಾಂಗದ ವ್ಯಕ್ತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಇವರು ಬಯಲಾಟ ನಡೆಯುವ ದಿನದಂದು ಮಾವಿನ ಎಲೆಗಳಿಂದ ಹಾಗೂ ಕೆಂಕೇಸರಿ ಹೂಗಳಿಂದ ತಳಿರು ತೋರಣಗಳನ್ನು ಕಟ್ಟುವ ಮುಖಾಂತರ ನೆರವಾಗುತ್ತಾರೆ.

ಪ್ರದರ್ಶನ ನಡೆಯುವ ಊರಿನ ಮುಖಂಡರು ತಮಟೆಯವರನ್ನು ಕರೆಸಿ, ಅವರಿಗೆ ಪ್ರದರ್ಶನ ನಡೆಯುವ ಸುತ್ತ-ಮುತ್ತಲಿನ ಹಳ್ಳಿಗಳಿಗೆ ವಿಚಾರವನ್ನು ಮುಟ್ಟಿಸಲು ಕಳುಹಿಸುತ್ತಾರೆ. ಹೀಗೆ ಗೌಡರು-ಪಟೇಲರು ತಿಳಿಸಿದಂತಹ ಸಾರ್ವಜನಿಕ ಸುದ್ದಿಯನ್ನು ತಮಟೆಯವರು ಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತ "ಕೇಳ್ರಪ್ಪೋ ಕೇಳ್ರಿ ಬೇಡತ್ತೂರ್ ನಾಗೇ ನಾಳೆ ರಾತ್ರಿಗೆ ದೇವಿ ಮಹಾತ್ಮೆ ಬೈಲ್ ನಾಟ್ಕ ನಡಿತೈತೆ ಎಲ್ಲರೂ ತಪ್ಪದಂಗೆ ಬರಬೇಕು" ಎಂಬುದಾಗಿ ಗಟ್ಟಿಯಾಗಿ ಕೂಗುತ್ತಾರೆ. ಹೀಗೆ ಊರುಗಳಲ್ಲಿ ಸುದ್ದಿ ಪ್ರಚಾರ ಮಾಡುವಂತಹ ಕಾರ್ಯವನ್ನು ತಮಟೆಯವರು ಬಹಳ ಪ್ರಾಚೀನ ಕಾಲದಿಂದಲೂ ಮಾಡಿಕೊಂಡು ಬಂದಿದ್ದಾರೆ. ಈ ತಮಟೆಯವರಿಗೆ ಅವರು ಮಾಡಿದ ಕಾರ್ಯಕ್ಕಾಗಿ ಬಯಲಾಟದ ಪಾತ್ರಧಾರಿಗಳಿಂದ ವ್ಯವಸ್ಥಾಪಕರಿಂದ ಸೂಕ್ತವಾದ ಸಂಭಾವನೆ ದೊರೆಯುತ್ತದೆ. ಹಾಗೆಯೇ ಛಲವಾದಿ ಮತಸ್ಥರು ಕೂಡ ದೈವಿಕ ಪಾತ್ರಗಳಾದ ಆದಿಶಕ್ತಿ, ಕಾಳಿ, ಕೃಷ್ಣ, ಈಶ್ವರ ಮುಂತಾದ ಪಾತ್ರಧಾರಿಗಳು ರಂಗಕ್ಕೆ ಪ್ರವೇಶಿಸಿದಾಗ ಅರೆವಾದ್ಯವನ್ನು ನುಡಿಸುತ್ತಾರೆ. ಕಹಳೆ (ಕೊಂಬು) ಎನ್ನುವ ಗಾಳಿ ವಾದ್ಯವನ್ನು ಊದುತ್ತಾರೆ.

ಊರಿನಲ್ಲಿ ನಡೆಯುವ ಊರ ಮಾರಿಯ ಜಾತ್ರೆಯ ಸಂದರ್ಭದಲ್ಲಿ ಸರ್ವೇಸಾಮಾನ್ಯವಾಗಿ ದೇವಿ ಮಹಾತ್ಮೆ, ಪಾತಾಳಹವನ, ರಾಮ-ರಾವಣರ ಯುದ್ಧ,

ISSN : 3048-7137

ಇಂದ್ರಜಿತು ಕಾಳಗ, ದಕ್ಷ ಯಜ್ಞ ಮೊದಲಾದ ಬಯಲಾಟದ ಪ್ರಸಂಗಗಳನ್ನು ಪ್ರದರ್ಶಿಸುತ್ತಾರೆ. ಈ ಕಥೆಗಳನ್ನು ಪ್ರದರ್ಶಿಸುವಾಗ ಕುರಿ, ಮೇಕೆ ಹಾಗೂ ಕೋಳಿಗಳನ್ನು ಬಲಿ ಕೊಡಲಾಗುತ್ತದೆ.ಬಲಿಮರಿಯನ್ನು ಆ ಊರಿನ ತಳವಾರರೇ (ನಾಯಕ ಜನಾಂಗ) ಕಡಿಯಬೇಕು. ಬೇರೆ ಯಾವ ಜಾತಿಯವರು ಬಲಿಮರಿ(ದೃಷ್ಟಿ ಮರಿ) ಕಡಿಯುವಂತಿಲ್ಲ. ತಳವಾರರ ಗುಂಪಿಗೆ ಸೇರಿದವರೇ ಈ ಕಾರ್ಯವನ್ನು ನೆರವೇರಿಸುವುದು ಈಗಲೂ ಕಂಡುಬರುತ್ತಿದೆ. ಕರ್ನಾಟಕ ಆಂಧ್ರದ ಗಡಿಭಾಗದ ತಾಲೂಕು ಮಧುಗಿರಿ ಸೀಮೆಗೆ ಸೇರಿದ ನೀರಕಲ್ಲು, ಹನುಮಂತಪುರ, ತೋಟಮಡಗಲು, ಬೇಡತ್ತೂರು, ಲಕ್ಕಿಹಟ್ಟಿ, ಮಡಕಶಿರಾ ಪ್ರಾಂತ್ಯದ ಹೊಟ್ಟೆಬೆಟ್ಟ, ರತ್ನಗಿರಿ (ಇಲ್ಲಿ ಇತಿಹಾಸ ಪ್ರಸಿದ್ಧ ಕೊಲ್ಲಾಪುರ ಮಹಾಲಕ್ಷ್ಮಿಯ ದೇವಾಲಯವಿದೆ), ಅಮರಾಪುರ, ತಿರುಮಲದೇವರಪಲ್ಲಿ ಮುಂತಾದ ಕಡೆಗಳಲ್ಲಿ ಬಲಿಕೊಡುವ ಪದ್ಧತಿ ರೂಢಿಯಲ್ಲಿದೆ. ಇದಲ್ಲದೆ ತಳವಾರರು ಇಡೀ ರಾತ್ರಿ ಎಚ್ಚರದಿಂದೆದ್ದು ಗಲಾಟೆ ಗದ್ದಲ ನಡೆಯದಂತೆ ರಂಗದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ.

ಬಯಲಾಟ ಪ್ರದರ್ಶನವೂ ಆ ಊರಿನ ಪ್ರಥಮ ಪ್ರಜೆಗಳಾದ ಗೌಡ, ಗೊಂಚಿಕಾರ, ಪಟೇಲ, ಶಾನುಭೋಗ ಮುಂತಾದವರ ನಾಯಕತ್ವದಲ್ಲಿ ನಡೆಯುತ್ತದೆ. ಇವರು ಪ್ರದರ್ಶನ ದಿನದಂದು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆದಂತೆ ಎಚ್ಚರಿಕೆ ವಹಿಸುತ್ತಾರೆ. ಗದ್ದಲ ಹೊಡೆದಾಟ ಅನಿರೀಕ್ಷಿತ ಘಟನೆಗಳು ಘಟಿಸಿದರೆ ತಪ್ಪು ಮಾಡಿದವರಿಗೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸುತ್ತಾರೆ. ತೀವ್ರತರ ತಪ್ಪು ಮಾಡಿದ ವ್ಯಕ್ತಿಗಳಿಗೆ ದಂಡ ವಿಧಿಸುವ ಅಧಿಕಾರವನ್ನು ಕೆಲವೊಮ್ಮೆ ಚಲಾಯಿಸುವುದು ಉಂಟು.

ಈ ಭಾಗದ ಜನರು ಬಯಲಾಟವನ್ನು ಒಂದು ದೈವಿಕ ಆರಾಧನೆ ಎಂದು ತಿಳಿದಿರುವುದರಿಂದ, ಗ್ರಾಮದ ಅನುಕೂಲಸ್ತ ರೈತರು ರಂಗ ನಿರ್ಮಾಣಕ್ಕೆ ಬೇಕಾದ ಅಡಿಕೆ ಮರ, ನೀಲಗಿರಿ ಮರ, ಬಿದಿರು ಬೊಂಬು ಇನ್ನಿತರೆಗಳಗಳನ್ನು ನೀಡುತ್ತಾರೆ. ಎತ್ತುಗಾಡಿ ಇರುವವರು ರಂಗಸಜ್ಜಿಕೆ ಹಾಗೂ ರಂಗ ಪರಿಕರಗಳನ್ನು, ವಸ್ತ್ರ-ಒಡವೆ ತುಂಬಿದ ಪೆಟ್ಟಿಗೆಗಳನ್ನು ತರಲು ಎತ್ತು ಗಾಡಿಗಳನ್ನು ಉಚಿತವಾಗಿ ನೀಡುವ ಮೂಲಕ ನೆರವಾಗುತ್ತಾರೆ. ಕೆಲವರು ಸೀನರಿ ಇರುವ ಊರಿಗೆ ಹೋಗಿ ಇವನ್ನೆಲ್ಲ ಗಾಡಿಗಳಲ್ಲಿ ತುಂಬಿಕೊಂಡು ಬಂದು ರಂಗ ಮಂಟಪ ನಿರ್ಮಾಣದಲ್ಲಿ ತೊಡಗುತ್ತಾರೆ. ಪ್ರದರ್ಶನ ಆರಂಭದ ವಿಧಿ ವಿಧಾನಕ್ಕೆ ಬೇಕಾದ ಪೂಜಾ ಸಾಮಗ್ರಿಗಳಾದ ಅಡಿಕೆ, ವೀಳ್ಯದೆಲೆ, ಹೂವು, ತೆಂಗಿನ ಕಾಯಿ, ಬಾಳೆಹಣ್ಣು, ಹೊಂಗೆ ಎಣ್ಣೆ ಇವುಗಳನ್ನು ತೋಟ ಇರುವ ರೈತರು ಉಚಿತವಾಗಿ ನೀಡುತ್ತಾರೆ. ಅಷ್ಟೇ ಅಲ್ಲದೆ ಅಟ್ಟ ನಿರ್ಮಾಣಕ್ಕೆ ಬೇಕಾದ ಮರದ ಹಲಗೆಗಳು, ತೊಲೆ ಇನ್ನಿತರ ವಸ್ತುಗಳನ್ನು ಉಚಿತವಾಗಿ ನೀಡುವ ಪರಂಪರೆ ಈಗಲೂ

ನಡೆದುಕೊಂಡು ಬಂದಿದೆ ಹೀಗೆ ಬಯಲಾಟವು ಗ್ರಾಮೀಣ ವ್ಯವಸ್ಥೆಯಲ್ಲಿ ಸರ್ವಜನರ ಸಹಯೋಗದೊಂದಿಗೆ ಸಹ ಸಂಬಂಧ ಬೆಳೆಸಿಕೊಂಡು ಸಾಮರಸ್ಯದಿಂದ ಪ್ರದರ್ಶಿತಗೊಳ್ಳುತ್ತಿರುವುದನ್ನು ಮಧುಗಿರಿ, ಮಡಕಶಿರಾ ಪಾವಗಡ ಹಾಗೂ ಶಿರಾ ಭಾಗಗಳಲ್ಲಿ ಕಂಡು ಬರುತ್ತಿರುವುದನ್ನು ಇಂದಿಗೂ ಗುರುತಿಸಬಹುದು.

ಬಯಲಾಟ ಸಂಸ್ಕೃತಿಯು ಕರ್ನಾಟಕ ಆಂಧ್ರ ಜನತೆಯಲ್ಲಿ ಹಾಸು ಹೊಕ್ಕಾಗಿದೆ. ಸಂಸ್ಕೃತಿಯು ಮಾನವನು ಗಳಿಸಿಕೊಂಡ ಸಮಸ್ತ ವಿಷಯಗಳನ್ನು ಕಲಿಕೆಯ ಮೂಲ ಗಳಿಂದ ತಲೆಮಾರಿನಿಂದ ತಲೆಮಾರಿಗೆ ಅಂತರ್ಗತಗೊಳಿಸಿಕೊಂಡು ಬಂದಿರು ವಂತದ್ದು. ಮಾನವನ ಸಮಸ್ತ ಸಾಮಾಜಿಕ ಪರಂಪರೆಯನ್ನು ಒಂದು ಸಂಸ್ಕೃತಿ ಯಾವುದೋ ಒಂದು ಜನಾಂಗದ ಸಾಮಾಜಿಕ ಪರಂಪರೆಯನ್ನು ಸೃಷ್ಟಿಸುತ್ತದೆ. ಸಂಸ್ಕೃತಿಯು ಮಾನವನ ಅಂತರಂಗ ಬಹಿರಂಗ ಜೀವನಗಳೆರಡನ್ನು ಒಳಗೊಂಡಿರುತ್ತದೆ. ನಾಗರಿಕತೆ ಮತ್ತು ಸಂಸ್ಕೃತಿ ಮಾನವನ ಅನುಭವದ ವಿಸ್ತಾರವಾದ ಎರಡು ದಟ್ಟ ಕ್ಷೇತ್ರಗಳಾಗಿವೆ. ಜಾನಪದರ ಮೂಲ ಬೇರು ಮಾನವನ ವಿಕಾಸದಿಂದಲೇ ಬಂದಿರುವಂತದ್ದು.

## ಬಯಲಾಟದಲ್ಲಿ ದ್ರಾವಿಡ ಮತ್ತು ವೈದಿಕ ಸಂಸ್ಕೃತಿ

ಆದಿಮಾನವನು ಪ್ರಕೃತಿಯ ಇತಿಮಿತಿಯಲ್ಲಿ ಬೆಳೆದು ಬಂದವನು. ಪ್ರಕೃತಿಗೆ ಹೆದರಿ ಜೀವನವನ್ನು ನಡೆಸಿದವನು. ಅದರ ಆರಾಧನೆ ಮಾಡದ ಹೊರತು ತನಗೆ ಉಳಿಗಾಲವಿಲ್ಲ ಎಂಬುದನ್ನು ಕಲ್ಪಿಸಿಕೊಂಡು ಅಗೋಚರವಾದ ದೈವಿಕ ಶಕ್ತಿಯನ್ನು ಶಾಂತ ಗೊಳಿಸಲು ಅನೇಕ ಪ್ರಯತ್ನಗಳನ್ನು ಮಾಡಿಕೊಂಡು ಬಂದಿದ್ದಾನೆ. ಪ್ರಾರ್ಥನೆ, ಪೂಜೆ, ದೈಹಿಕ ದಂಡನೆ, ಉಪಾಸನೆ ವ್ರತ, ಭಜನೆ, ಹರಕೆ ಹೊರುವುದು, ಅಡ್ಡ ಬೀಳುವುದು, ದೀಪಾರಾಧನೆ, ಬಲಿ ನೀಡುವ ಇನ್ನಿತರ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾನೆ. ಆರಾಧನೆಯ ವಿಧಿ ವಿಧಾನಗಳ ಪ್ರಕ್ರಿಯೆಗಳು ಮುಂದೆ ಕಾಲಾನಂತರ ಜಾನಪದ ಕಲೆಗಳಾಗಿ ಮಾರ್ಪಟ್ಟಿವೆ ಬಯಲಾಟದಂತಹ ಜಾನಪದ ರಂಗ ಕಲೆಯು ಕೂಡ ಆರಾಧನೆ ನೆಲೆಯಲ್ಲಿಯೇ ಉದ್ಭವಿಸಿರಬೇಕು? ಇಲ್ಲಿನ ಕ್ರಿಯಾ ಚಟುವಟಿಕೆಗಳಲ್ಲೂ ಪ್ರಕೃತಿಯ ಪೂಜೆಯಿಂದಲೇ ಪ್ರಾರಂಭಗೊಳ್ಳುತ್ತದೆ.

ಕೃಷಿ ಸಂಸ್ಕೃತಿಯ ಕ್ರಿಯಾ ಚಟುವಟಿಕೆಗಳೂ ಪ್ರಕೃತಿಯ ಪೂಜೆಯೊಂದಿಗೆ ಪ್ರಾರಂಭಗೊಳ್ಳುತ್ತವೆ. ಹಳ್ಳಿಗಳಲ್ಲಿ ಮೊದಲು (ಕೃಷಿ ಕಾರ್ಯ ಆರಂಭ) ಮಾಡುವಾಗ ತಮ್ಮ ಹೊಲದ ದೇವಮೂಲೆ (ಈಶಾನ್ಯ ಮೂಲೆ)ಯಲ್ಲಿ ಸಗಣಿ ಉಂಡೆಯಲ್ಲಿ ಗರಿಕೆಯನ್ನು ಇಟ್ಟು (ಪಿಳ್ಳೆರಾಯ) ಇಲ್ಲವೇ ಮೂರು ಚಿಕ್ಕ ಕಲ್ಲುಗಳನ್ನು ತೊಳೆದು,

ISSN : 3048-7137

ಅವಕ್ಕೆ ಹೂ ನೀರಿಕ್ಕಿ ಪೂಜಿಸಿ ನಂತರ ತಮ್ಮ ಕೃಷಿ ಚಟುವಟಿಕೆಗಳನ್ನು ಜನಪದರು ಆರಂಭಿಸುತ್ತಾರೆ. ಈ ರೀತಿಯ ಆರಾಧನೆಗಳು ಭತ್ತದ ಪೈರು ನಾಟಿ ಮಾಡುವಾಗ, ಒಕ್ಕಣೆ ಮಾಡುವಾಗ, ರಾಶಿ ಪೂಜೆ ಮಾಡುವಾಗ, ದವಸ ಧಾನ್ಯಗಳನ್ನು ಪೂಜಿಸುತ್ತಾ ಗಣಪತಿಯನ್ನು ನೆನೆಯುವುದು ಆರಾಧಿಸುವುದು ಕಂಡುಬರುತ್ತದೆ. ಹಾಗೆಯೇ ಬಯಲಾಟವೆಂಬ ರಂಗ ಪ್ರದರ್ಶನವು ಸಹ ಜಾನಪದ ಬಹು ದೊಡ್ಡ ಕೊಡುಗೆಯಾಗಿದೆ. ಜಾನಪದರು ಯಾವುದೇ ಕಲೆಯನ್ನು ಆರಂಭಿಸಬೇಕಾದಲ್ಲಿ ವಿಘ್ನೇಶ್ವರನನ್ನು ಪೂಜಿಸಿ ಆರಾಧಿಸಿ ಅವನಿಗೆ ಅಗ್ರ ಪೂಜೆ ನೀಡುವುದು ಆದಿಕಾಲದಿಂದಲೂ ನಡೆದು ಬಂದಿರುವ ಸಂಸ್ಕೃತಿಯ ದ್ಯೋತಕವಾಗಿದೆ. ಬಯಲಾಟದಲ್ಲಿ ರಂಗ ತಾಲೀಮಿನಿಂದ ಮೊದಲುಗೊಂಡು, ರಂಗದಲ್ಲಿ ಪ್ರದರ್ಶನ ಮುಕ್ತಾಯವಾಗುವವರೆಗೂ ವಿವಿಧ ಆರಾಧನೆ, ಆಚರಣೆ, ಸಂಪ್ರದಾಯಗಳು ರಂಗದಲ್ಲಿ ರಂಗದ ನೇಪತ್ಯದಲ್ಲಿ ಕಂಡುಬರುವ ವಿಧಿಕ್ರಿಯೆಗಳಾಗಿವೆ. ಬಯಲಾಟದ ಯಾವುದೇ ಪ್ರಸಂಗ ಪ್ರದರ್ಶನವಾಗಬೇಕಾದರೆ ಅಲ್ಲಿ ಅನೇಕ ವಿಧಿ ಬದ್ಧ ಕ್ರಿಯಾತ್ಮಕ ಚಟುವಟಿಕೆಗಳು ಜರುಗುತ್ತವೆ.

ಮಧುಗಿರಿ, ಮಡಕಶಿರಾ, ಪಾವಗಡ ಮತ್ತು ಶಿರಾ ಭಾಗಗಳಲ್ಲಿ ಆಷಾಡ ಮಾಸದಲ್ಲಿ ಊರಮಾರಿಯ ಜಾತ್ರೆಗಳು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಜಾತ್ರೆಗಳು ಇದ್ದರೆ ವಿಶೇಷವಾಗಿ ಊರಿನ ಹೆಣ್ಣು ಮಕ್ಕಳೆಲ್ಲ ಸಾಮೂಹಿಕವಾಗಿ ಆರತಿ ಮಾಡುವುದು ಮೊದಲಿಂದಲೂ ನಡೆದುಕೊಂಡು ಬಂದ ಸಂಪ್ರದಾಯ. ಅಕ್ಕಿಮ ಹಿಟ್ಟನ್ನು ಬೆಲ್ಲದ ಪಾಕದಲ್ಲಿ ಮಿಶ್ರಣ ಮಾಡಿ, ಘನಾಕೃತಿಯ ಆಕಾರದಲ್ಲಿ ಮಾಡಿದ ಸಿಹಿಯುತ್ತ ಪದಾರ್ಥವೇ ಆರತಿ. ತಂಬಿಟ್ಟಿನ ಮೇಲ್ಭಾಗದ ಮಧ್ಯದಲ್ಲಿ ಒಂದು ಚಿಕ್ಕ ಗುಂಡಿ ಮಾಡಿ, ಅಲ್ಲಿ ದೀಪವನ್ನು ಬೆಳಗಿಸುತ್ತಾರೆ. ಅದನ್ನು ಕಂಚು, ಇತ್ತಾಳೆ ಇಲ್ಲವೇ ಸ್ಟೀಲ್ ಬೇಸಿನ ಕಂಠದವರೆಗೂ ಇಟ್ಟು, ಕಂಠದ ಮೇಲೆ ಕಣಗಿಲೆ, ದೀಪದ ಕಣಗಿಲೆ, ರುದ್ರಾಕ್ಷಿ ಚೆಂಡು ಹೂ, ಚಿಂತಾಮಣಿ, ಸುಗಂಧರಾಜ ಮುಂತಾದ ಹೂಗಳಿಂದ ಸಿಂಗರಿಸಿ ಮೆರವಣಿಗೆಯಲ್ಲಿ ಸಾಮೂಹಿಕವಾಗಿ ಬಂದು ದೇವ–ದೇವಿಯರ ದೇವಸ್ಥಾನಗಳಿಗೆ ಪ್ರದಕ್ಷಿಣೆ ಮಾಡಿ ಆರಾಧಿಸುವುದು ಕಂಡುಬರುತ್ತದೆ. ಇದನ್ನು ಆರತಿ ಉತ್ಸವವೆಂದು ಕರೆಯುತ್ತಾರೆ. ಇದೇ ರೀತಿಯ ಉತ್ಸವ ಗಡಿ ಭಾಗದಲ್ಲಿರುವ ಜಿರ್ಲಗುಂಟೆ ಆಂಜನೇಯರಿಗೂ ಹಾಗೂ ಚಿಕ್ಕದಾಳವಾಟದ ನರಸಿಂಹ ಸ್ವಾಮಿಗೂ ನಡೆಯುತ್ತದೆ.

ಈ ಜಾತ್ರೆಯ ಸಂದರ್ಭದಲ್ಲಿ ವಿಶೇಷ ಪ್ರಸಂಗವಾದ 'ದೇವಿ ಮಹಾತ್ಮೆ' ಆಟ ನಡೆಯುವಾಗ ದೇವಿಯ ಪಾತ್ರ ಮಧ್ಯರಾತ್ರಿ ರಂಗವನ್ನು ಪ್ರವೇಶಿಸುತ್ತದೆ. ಪಾತ್ರವನ್ನು

ರಂಗಸ್ಥಳದ ಸಿಂಹಾಸನದ ಮೇಲೆ ಕೂರಿಸಲಾಗಿರುತ್ತದೆ. ಪರದೆ ಮೇಲೆಕ್ಕೆಳೆಯುವ ಮುಂಚೆ ದೇವಿ ಪಾತ್ರಕ್ಕೆ ಸಂಬಂಧಿಸಿದ ಸೌರಾಷ್ಟ್ರ ರಾಗದಲ್ಲಿ ದೇವಿಯ ಕುರಿತಾದ ದಂಡಕವನ್ನು ಮುಖವೀಣೆ ನೆರವಿನೊಂದಿಗೆ ಭಾಗವತರು ಹಾಡುತ್ತಾರೆ. ತೆರೆಯನ್ನು ಮೇಲಕ್ಕೆತ್ತಿದ ಮೇಲೆ ಪಾತ್ರಕ್ಕೆ ನಿಂಬೆಹಣ್ಣು ನೀವಳಿಸಲಾಗುತ್ತದೆ. ನಾಟಿ ಹಸುವಿನ ಗಂಜಲವನ್ನು ಇಡೀ ರಂಗದ ತುಂಬಾ ಬೇವಿನ ಎಲೆಗಳಕೊನೆಯಿಂದ ಸಿಂಪಡಿಸಲಾಗುತ್ತದೆ. ಇದು ಮಡಿ–ಮೈಲಿಗೆ, ಅಂಟು–ಮುಂಟು, ಕೆಡುಕು ಪಾತ್ರಧಾರಿಗಳಿಗಾಗಲಿ ಇಲ್ಲವೇ ಆಟಕ್ಕಾಗಲಿ ಉಂಟಾಗದಿರಲಿ ಎಂದು ಮಾಡುವ ಆಚರಣೆಯಾಗಿದೆ. ಆನಂತರ ಪೂಜಾರಿಯು ರಂಗಕ್ಕೆ ಬಂದು ದೇವಿ ಪಾತ್ರಕ್ಕೆ ನೈವೇದ್ಯ ಸಮೇತ ಪೂಜೆಸಲ್ಲಿಸುತ್ತಾರೆ. ಕುಂಕುಮ ಮಿಶ್ರಿತ ನೀರು ತುಂಬಿದ ಕುಂಬಳಕಾಯಿಯನ್ನು ನಿವಾಳಿಸಿ ರಂಗದ ಮುಂಭಾಗದಲ್ಲಿ ಹೊಡೆಯಲಾಗುತ್ತದೆ. ಕೆಂಪನ ಮೊಸರನ್ನವನ್ನು ನಿವಾಳಿಸಿ ರಂಗದ ಮುಂಭಾಗದಲ್ಲಿ ಹಾಕುತ್ತಾರೆ. ಇದಾದ ಬಳಿಕ ಊರಿನ ಹೆಣ್ಣು ಮಕ್ಕಳು ಮೊದಲೇ ತಿಳಿಸಿದಂತೆ ತಂಬಿಟ್ಟಿನ ಆರತಿಯನ್ನು ತಂದು ಬೆಳಗುತ್ತಾರೆ. ಹೂವು ಹಣ್ಣು ತೆಂಗಿನಕಾಯಿಗಳನ್ನು ತಂದು ಮಂಗಳಾರತಿ ಮಾಡಿಸುತ್ತಾರೆ. ಇದು ಜಾನಪದರಲ್ಲಿ ಕಂಡುಬರುವ ಒಂದು ವಿಶೇಷ ಭಕ್ತಿಯ ದ್ಯೋತಕವಾಗಿದೆ. ಪಾತ್ರ ಧರಿಸುವವರು ಯಾರೇ ಆಗಿರಲಿ ಯಾವ ಜಾತಿಯವರೇ ಆಗಿರಲಿ ದೈವದ ಪ್ರತಿಕವಾಗಿ ಬಿಂಬಿತವಾಗುತ್ತಾರೆ. ಪಾತ್ರದಾರಿಯು ದೇವಿಯು ಮೈ ಮೇಲೆ ಬಂದಂತೆ ಆರ್ಭಟಿಸುತ್ತಾನೆ. ಮೂರ್ಛೆ ಹೋದಂತೆ ನಟಿಸುವುದು ಕಂಡುಬರುತ್ತದೆ. ಗುಡಿಯಲ್ಲಿರುವ ದೇವಿಗೆ ಆರಾಧನೆ ಮಾಡಿದಂತೆ ಬಯಲಾಟದಲ್ಲಿ ಬರುವ ಇಂತಹ ದೇವಿ ಪಾತ್ರವನ್ನು ಆರಾಧಿಸುವುದು ಕಾಲಿಗೆ ಬಿದ್ದು ನಮಸ್ಕರಿಸುವುದು ಕಂಡುಬರುತ್ತದೆ. ಪಾತ್ರಕ್ಕೆಸಾಕ್ಷಾತ್ ದೇವಿಯೇ ಪರಕಾಯ ಪ್ರವೇಶ ಮಾಡಿ ನಮಗೆ ಆ ಮೂಲಕ ಒಳಿತನ್ನು ಮಾಡಲು ಬಂದಿದ್ದಾಳೆ ಎಂಬ ಅದಮ್ಯವಾದ ನಂಬಿಕೆಯನ್ನು ಪ್ರೇಕ್ಷಕರು ಹೊಂದಿರುತ್ತಾರೆ. ಈ ಮೂಲಕ ದೇವಿಯನ್ನು ಆರಾಧಿಸಿ ಪ್ರಸನ್ನ ಗೊಳಿಸಲಾಗುತ್ತದೆ. ಇದೇ ತೆರನಾದ ನಿಷ್ಠೆಯನ್ನು ಶನಿಯ ರಂಗ ಪ್ರವೇಶಕ್ಕೆ ಬಂದಾಗ ಭಯ ಭಕ್ತಿಯಿಂದ, ನೇಮ ನಿಷ್ಠೆಯಿಂದ ಪೂಜಿಸುವುದು, ನಿಂಬೆಹಣ್ಣು, ಕುಂಬಳಕಾಯಿ ಕೆಂಪನ್ನ, ಮೊಸರನ್ನನಿವಾಳಿಸುವುದು ಕಂಡುಬರುತ್ತದೆ. ರಾಮ–ರಾವಣರ ಯುದ್ಧ ಪ್ರಸಂಗವನ್ನು ಆಡುವಾಗ ಲಕ್ಷ್ಮಣ ಮೂರ್ಛೆ ಇನ್ನಿತರ ಪ್ರಸಂಗಗಳಲ್ಲಿ ರಾವಣ ಹಾಗೂ ಅವನ ಮಗನಾದ ಮೇಘನಾದ ಕೊಂಭಿಣಿ, ನಿಕುಂಭಿಣಿ ಎಂಬ ಯಾಗಗಳನ್ನು ಮಾಡಿ ವಿಶೇಷ ಶಕ್ತಿಯನ್ನು ಗಳಿಸಲು ಪ್ರಯತ್ನಿಸುತ್ತಾರೆ. ಯಾಗಕ್ಕೆ ಬೇಕಾಗುವ ಯಜ್ಞಾಕುಂಡವನ್ನು ರಂಗದಲ್ಲಿ ಇಲ್ಲವೇ ರಂಗದ ಮುಂಭಾಗದಲ್ಲಿಯೇ ನಿರ್ಮಾಣ ಮಾಡುತ್ತಾರೆ. ಯಜ್ಞಕ್ಕೆ ಬೇಕಾದ ಪರಿಹಾರ

ISSN : 3048-7137

ಗಳನ್ನು ಸಿದ್ಧಪಡಿಸಿಕೊಂಡು ಅಗ್ನಿಯನ್ನು ಪ್ರತಿಷ್ಠಾಪಿಸಿ ಯಾಗ ನೆರವೇರಿಸುವುದು. ಹಲವು ಕಡೆ ಕಂಡು ಬರುತ್ತದೆ. ಯಜ್ಞಕ್ಕಾಗಿ ಅರಿಶಿನ, ಕುಂಕುಮ, ಹೂ, ಅಕ್ಷತೆ, ಯಜ್ಞದ ಸುತ್ತ ರಂಗು ರಂಗಿನ ತರದ ರಂಗೋಲಿಗಳನ್ನು ಬಿಡಿಸಲಾಗುತ್ತದೆ. ಹಾಗೆಯೇ ಕುಂಬಳಕಾಯಿಯನ್ನು ಹೊಡೆಯಲಾಗುತ್ತದೆ. ಯಜ್ಞದ ಶಾಂತಿಗಾಗಿ ಕೆಡು ಸಂಭವಿಸದಿರಲಿ ಎಂದು ಕೆಂಪನ್ನ, ಮೊಸರನ್ನ ಬಳಸುವುದುಂಟು. ಮಧುಗಿರಿ ಸೀಮೆಯ ಎಮ್ಮೆತಿಮ್ಮನಹಳ್ಳಿ, ನೀರಕಲ್ಲು, ಬ್ರಹ್ಮದೇವರಹಳ್ಳಿ ಇನ್ನಿತರೆ ಸ್ಥಳಗಳಲ್ಲಿ ಮೇಕೆ, ಕುರಿ, ಕೋಳಿಗಳನ್ನು ಯಜ್ಞಕ್ಕೆ ಬಲಿ ಕೊಡುತ್ತಾರೆ. ಇವೆಲ್ಲ ಕ್ರಿಯೆಗಳನ್ನು ಗಮನಿಸಿದಾಗ ಬಯಲಾಟದ ಮೇಲೆ ವೈದಿಕ ಸಂಸ್ಕೃತಿಯ ಪ್ರಭಾವವಾಗಿರುವುದನ್ನು ಅಲ್ಲಗಳಾಗದು. ಹೀಗೆ ಬಯಲಾಟವು ಆರ್ಯ–ದ್ರಾವಿಡ ಎರಡು ಸಂಸ್ಕೃತಿಗಳನ್ನ ಮೇಳೈಸಿಕೊಂಡು ಕರ್ನಾಟಕ ಆಂಧ್ರ ಗಡಿಭಾಗದಲ್ಲಿ ಬೆಳೆದು ಬಂದಿದೆ. ಜೈನ ಧರ್ಮದ ಕುರಿತಾದ 'ಜಿನದತ್ತ ರಾಯನ ಕಥೆ'ಯು ರಂಗಭೂಮಿಯಲ್ಲಿ ಪ್ರಯೋಗ ಗೊಂಡಿರುವುದು ಬಯಲಾಟ ಇತಿಹಾಸದಲ್ಲಿ ವಿಶೇಷ ಹಾಗೂ ದಾಖಲಾರ್ಹ ಸಂಗತಿಯಾಗಿದೆ.

## ವಕ್ತೃಗಳ ವಿವರ

1. ನರಸೇಗೌಡರು, 52, ಶಿಕ್ಷಕ ಮತ್ತು ಭಾಗವತರು, ಕುಂಚಿಟಿಗ.ಹನುಮಂತಪುರ
2. ಜಗದೀಶ್. ಬಿ ಎನ್ 40. ರಂಗಕರ್ಮಿ, ಕೊರಚರು, ಬೇಡತ್ತೂರು
3. ತಿಮ್ಮಣ್ಣ, 80, ಬೇಸಾಯ ಮತ್ತು ಪಾತ್ರಧಾರಿ. ಕುಂಬಾರ, ಹನುಮಂತಪುರ
4. ರಾಮಾಂಜನೇಯ. 80, ಆಯುರ್ವೇದ ಪಂಡಿತರು, ಬಣಜಿಗ. ಬೇಡತ್ತೂರು

## ಪರಾಮರ್ಶನ ಗ್ರಂಥಗಳು

1. ಬಸವರಾಜ ಮಲ್ಲ ಶೆಟ್ಟಿ, 1983, ಉತ್ತರ ಕರ್ನಾಟಕದ ಬಯಲಾಟಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
2. ನರಸೇಗೌಡಹೆಚ್. ಡಿ. 2021, ಮಧುಗಿರಿ ಸೀಮೆಯ ಬಯಲಾಟಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಶಿವರಾಮ ಕಾರಂತ. ಕೆ. 2015, ಯಕ್ಷಗಾನ ಬಯಲಾಟ, ರವೀಂದ್ರ ಪುಸ್ತಕಾಲಯ, ಚಾಮರಾಜಪೇಟೆ, ಸಾಗರ. ಶಿವಮೊಗ್ಗ ಜಿಲ್ಲೆ
4. ಸೀತಾರಾಮಯ್ಯ .ಎಂ.ವಿ.(ಸಂ), 2011, ಶ್ರೀವಿಜಯಕೃತ ಕವಿರಾಜಮಾರ್ಗಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು